[ Govt. of Karnataka
C.R.P. 67]

| Deposition Sheets<br>(RP.No.57)<br>Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 1567/2023**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 3

ಸಾಕ್ಷಿದಾರನ ಹೆಸರು : ಡಾ. ಸುಬೋದ್ ಶೆಟ್ಟಿ

ತಂದೆಯ ಹೆಸರು : ದಿಃ ಶ್ಯಾಮ್ ಸುಂದರ್ ಶೆಟ್ಟಿ

ಪ್ರಾಯ : 51 ವರ್ಷ

ಉದ್ಯೋಗ : ವೈದ್ಯಾಧಿಕಾರಿ, ದಾವಣಗೆರೆ

ವಾಸ : ದಾವಣಗೆರೆ

ದಿನಾಂಕ 29.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ. ಚಾಸಾ-2 ರವರನ್ನು ನೋಡಿ ಪರಿಚಯ ಇದೆ. ಚಾಸಾ-1 ರವರ ಪರಿಚಯ ಇರುವುದಿಲ್ಲ.

ನಾನು ದಿನಾಂಕ 17.06.2023 ದಾವಣಗೆರೆಯಿಂದ ಮಣಿಪಾಲಕ್ಕೆ ಹೋಗುತ್ತಿರುವಾಗ ಸಂಜೆ 5.45 ಗಂಟೆಗೆ ಹೆಬ್ರಿಯ ಸೀತಾನದಿ ಹತ್ತಿರ ನನ್ನ

ಎದುರಿನಲ್ಲಿ ಟ್ರಕ್ ಹೋಗುತ್ತಿದ್ದು ಸದರಿ ಟ್ರಕ್ ಗೆ ಎದುರುಗಡೆಯಿಂದ ಬಂದ ಮತ್ತೊಂದು ಟ್ರಕ್ ಢಿಕ್ಕಿಹೊಡೆಯಿತು. ನಾನು ಕೂಡಲೇ ಅಪಘಾತ ಸ್ಥಳಕ್ಕೆ ಓಡಿ ಹೋಗಿ ನೋಡಲಾಗಿ ಸಾರ್ವಜನಿಕರು ಸೇರಿದ್ದರು. ಸಾರ್ವಜನಿಕರು ಟ್ರಕ್ ನಲ್ಲಿದ್ದ ಚಾಲಕ ನನ್ನು ಹೊರತೆಗೆಯಲು ಪ್ರಯತ್ನಿಸುತ್ತಿದ್ದರು. ನಂತರ ಸದರಿ ಚಾಲಕನನ್ನು ಅಂಬ್ಯುಲೆನ್ಸ್ ನಲ್ಲಿ ಹೆಬ್ರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತಕ್ಕೆ ಏನು ಕಾರಣ ಮತ್ತು ಯಾರ ತಪ್ಪಿ ನಿಂದ ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತದಿಂದ ಯಾರು ಮೃತಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತವೆಸಗಿದ ವಾಹನದ ನೊಂದಾಣಿ ಸಂಖ್ಯೆ ನೆನಪಿಲ್ಲ. ಸಾಕ್ಷಿಯು ಅಪಘಾತಕ್ಕೊಳಪಟ್ಟ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 9 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರು:-</u>

ಈ ಅಪಘಾತಕ್ಕೆ ಎರಡು ವಾಹನದ ಚಾಲಕರ ಅತೀವೇಗ ಮತ್ತು ಅಜಾಗರೂಕತೆಯ ಚಲಾನೆಯೇ ಕಾರಣ ಎಂದರೆ ನನಗೆ ಗೊತ್ತಿಲ್ಲ. ಈ ಅಪಘುತಾದಿಂದ ಬಾಲಕೃಷ್ಣ ಎಂಬುವವರು ಮೃತಪಟ್ಟಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಾಗಿದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್ ಎನ್ ಕೆ ವಕೀಲರಿಂದ ಃ

ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ